# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 1266 |
| **ಸದಸ್ಯರ ಹೆಸರು** | ಶ್ರೀ ಸಿ.ಎಂ. ಲಿಂಗಪ್ಪ (ನಾಮ ನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 17.03.2021 |
| **ಉತ್ತರಿಸುವ ಸಚಿವರು** | ಕಂದಾಯ ಸಚಿವರು |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಮನಗರ ತಾಲ್ಲೂಕಿನಲ್ಲಿ ಸುಮಾರು 11600 ಅರ್ಜಿಗಳ ಬಾಬ್ತು ರೂ. 4,00,000/- ಗಳ ಶುಲ್ಕವನ್ನು ಪಡೆದು ಸರ್ವೆ ಕಾರ್ಯ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಮನಗರ ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನಲ್ಲಿ ಮೋಜಿಣಿ ತಂತ್ರಾಂಶದಡಿ ಸ್ವೀಕೃತಿಯಾದ ವಿವಿದ ಪ್ರಕರಣಗಳ ಪ್ರಗತಿ ವಿವರ ಈ ಕೆಳಕಂಡಂತಿದೆ:-
<table>
<tr><th>ವಿವರ</th><th>ಆರಂಭಿಕ ಶಿಲ್ಕು</th><th>ಸ್ವೀಕೃತಿ</th><th>ಒಟ್ಟು</th><th>ವಿಲೇ</th><th>ಬಾಕಿ</th></tr>
<tr><td>11ಇ</td><td>1657</td><td>2752</td><td>4409</td><td>2497</td><td>1912</td></tr>
<tr><td>ತತ್ಕಾಲ್ ಪೋಡಿ</td><td>696</td><td>777</td><td>1473</td><td>717</td><td>756</td></tr>
<tr><td>ಅನ್ಯಕ್ರಾಂತ</td><td>159</td><td>428</td><td>5 7</td><td>348</td><td>239</td></tr>
<tr><td>ಹದ್ದುಬಸ್ತು</td><td>460</td><td>1858</td><td>2318</td><td>1154</td><td>1164</td></tr>
<tr><td>ಇತರೆ</td><td>436</td><td>178</td><td>614</td><td>403</td><td>211</td></tr>
<tr><td>ಇ-ಸ್ವತ್ತು</td><td>172</td><td>1569</td><td>1741</td><td>608</td><td>1133</td></tr>
<tr><td>ಒಟ್ಟು</td><td>3580</td><td>7562</td><td>11142</td><td>5727</td><td>5415</td></tr>
</table>
ರಾಮನಗರ ತಾಲ್ಲೂಕಿನಲ್ಲಿ ಪ್ರಸಕ್ತ ಸಾಲಿನಲ್ಲಿ 11ಇ, ತತ್ಕಾಲ್ ಪೋಡಿ ಇತ್ಯಾದಿ ಅಳತೆ ಕೋರಿ ಒಟ್ಟು 7562 ಅರ್ಜಿಗಳು ಸ್ವೀಕೃತವಾಗಿದ್ದು, ಹಿಂದಿನ ಬಾಕಿ ಅರ್ಜಿಗಳು ಸೇರಿದಂತೆ ಒಟ್ಟು 5727 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಮಾಹೆ ಫೆಬ್ರುವರಿ -2021ರ ಅಂತ್ಯಕ್ಕೆ 5415 ಅರ್ಜಿ ಬಾಕಿ ಉಳಿದಿರುತ್ತವೆ.</td></tr>
<tr><td>ಆ)</td><td>ರೈತರು ಹಣ ಕಟ್ಟಿದ ಎಷ್ಟು ದಿನದಲ್ಲಿ ಸರ್ವೆ ಕಾರ್ಯ ಪೂರ್ಣಗೊಳಿಸಲು ಸಮಯ ನಿಗಧಿಪಡಸಿದೆ;</td><td>ಸ್ವೀಕೃತವಾದ ಅರ್ಜಿಯ ಕುರಿತು ಯಾವುದೇ ತಾಂತ್ರಿಕ ನ್ಯೂನ್ಯತೆಗಳಿಲ್ಲದಿದ್ದಲ್ಲಿ ಸದರಿ ಅರ್ಜಿ ವಿಲೇವಾರಿಗೆ 30 ದಿನಗಳ ಸಮಯ ನಿಗಧಿಪಡಿಸಲಾಗಿದೆ.</td></tr>
<tr><td>ಇ)</td><td>ರಾಮನಗರ ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ 11600 ಅರ್ಜಿಗಳನ್ನು ಎಷ್ಟು ದಿನದಲ್ಲಿ ವಿಲೇ ಮಾಡಿ ಕೊಡಲು ಸರ್ಕಾರ ಕ್ರಮ ವಹಿಸುತ್ತದೆ;</td><td rowspan="3">ರಾಮನಗರ ತಾಲ್ಲೂಕಿನಲ್ಲಿ ಮಾಹೆ ಫೆಬ್ರುವರಿ -2021 ರ ಅಂತ್ಯಕ್ಕೆ 5415 ಅರ್ಜಿ ಬಾಕಿ ಉಳಿದಿದ್ದು, ಸದರಿ ಅರ್ಜಿಗಳ ಶೀಘ್ರ ವಿಲೇವಾರಿಗಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br>1) ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು, ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಪದ್ಧತಿಯನ್ನು ಅಳವಡಿಸಲಾಗಿದೆ. ಪ್ರಕರಣವು ಅಳತೆಗೆ ಯೋಗ್ಯವಾಗಿದ್ದಲ್ಲಿ ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಆನ್‌ಲೈನ್‌ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್‌ಲೈನ್‌ನಲ್ಲಿಯೇ ನಿರ್ವಹಿಸಲಾಗುತ್ತಿದೆ. ತಂತ್ರಾಂಶದ ಮುಖಾಂತರ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.<br>2) ಕಾಲಕಾಲಕ್ಕೆ ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್‌ಗಳನ್ನು ನಡೆಸಲಾಗುತ್ತಿದೆ.<br>3) ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಕಡತಗಳನ್ನು ಕ್ಯಾಟ್-ಲಾಗ್ ಮತ್ತು ಇಂಡೆಕ್ಸಿಂಗ್ ಮಾಡಲು ಸೂಚಿಸಲಾಗಿದೆ.</td></tr>
<tr><td>ಈ)</td><td>ಸರ್ವೆ ಕಾರ್ಯ ವಿಳಂಬವಾದಷ್ಟು ರೈತರಿಗೆ ಸ್ಕೆಚ್ಚು, ಪೋಡಿ, ಪಹಣಿ ನೋಂದಣಿ ಸಹಕಾರ ಸಂಘಗಳ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಹಾಗೂ ಮಾರಾಟ ಮಾಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td></tr>
<tr><td>ಉ)</td><td>ಬಂದಿದ್ದಲ್ಲಿ, ಶೀಘ್ರ ಪರಿಹಾರ ಒದಗಿಸುವುದೇ?</td></tr>
</table>

| | | | |
|---|---|---|---|
| | | | 4)- ನಿಯಮಿತವಾಗಿ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ, ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಸೂಚನೆ ನೀಡಲಾಗುತ್ತಿದೆ.<br><br>5) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>6) ಹೊಸದಾಗಿ 2072 ಪರವಾನಗಿ ಭೂಮಾಪಕರ ಆಯ್ಕೆಗೆ ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ 1-2-2021 ಮತ್ತು 2-2-2021 ರಂದು ಪರೀಕ್ಷೆಯನ್ನು ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಸದರಿ ಅಭ್ಯರ್ಥಿಗಳಿಗೆ ತರಬೇತಿ ನೀಡಿ ಉತ್ತೀರ್ಣರಾದವರಿಗೆ ಪರವಾನಗಿ ವಿತರಿಸಿ, ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡಲಾಗುವುದು. |

**ಸಂಖ್ಯೆ: ಕಂಇ 42 ಎಸ್‌ಎಸ್‌ಸಿ 2021**

**(ಆರ್. ಅಶೋಕ)**
ಕಂದಾಯ ಸಚಿವರು